

بِسۡمِ اللّٰہِ الرَّحۡمٰنِ الرَّحِیۡمِ

# ಜರ್ಮನ್ ಜಲ್ಸ ಅತಿಥಿಗಳ ಅಭಿಪ್ರಾಯಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹರ್ಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ 12–07–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹರ್ಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಜರ್ಮನಿಯ ಅಹ್ಮದಿಯಾ ಜಮಾಅತಿನ ಜಲ್ಸ ಸಾಲಾನ ಅಲ್ಲಾಹನ ಅನುಗ್ರಹಗಳನ್ನು ಬಾಚಿಕೊಂಡು ಕೆಲವು ದಿನಗಳಲ್ಲಿ ಮುಕ್ತಾಯವಾಯಿತು. ಈ ವರ್ಷ ಆ ಜಲ್ಸದಲ್ಲಿ ಭಾಗವಹಿಸಿದವರ ಸಂಖ್ಯೆ ನಲ್ವತ್ತು ಸಾವಿರಕ್ಕಿಂತಲೂ ಹೆಚ್ಚಾಗಿತ್ತು. ನಮ್ಮ ಕೆಲಸಗಳಿಗೂ ನಮ್ಮ ಪ್ರಯತ್ನಗಳಿಗೂ ಮಿಗಿಲಾಗಿ ಅಲ್ಲಾಹನು ನಮಗೆ ನೀಡುತ್ತಿರುವುದು ಅವನ ಅನುಗ್ರಹದಿಂದ ಮಾತ್ರವಾಗಿದೆ. ನಾವು ಅಲ್ಲಾಹನಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತಾ ನಾವು ನಮ್ಮ ಶ್ರಮಗಳನ್ನು ವರ್ಧಿಸಲು ಪ್ರಯತ್ನ ಮಾಡುತ್ತಾ ಇರಬೇಕು. ಅದರ ಫಲಸ್ವರೂಪವಾಗಿ ಅಲ್ಲಾಹನ ಅನುಗ್ರಹಗಳು ವರ್ಧಿಸುತ್ತಾ ಮುಂದುವರಿಯುವಂತಾಗಲಿ. ಜಲ್ಸದಲ್ಲಿ ಭಾಗವಹಿಸಿದ ನಮ್ಮ ಜಮಾಅತಿಗೆ ಸೇರಿಲ್ಲದ ನೂರಾರು ಮುಸ್ಲಿಮರು ಮತ್ತು ಮುಸ್ಲಿಮೇತರ ಅತಿಥಿಗಳು ಹೀಗೆ ಅಭಿಪ್ರಾಯ ಹೇಳಿದರು: ಇಲ್ಲಿ ಒಂದು ಅಸಾಮಾನ್ಯ ಪರಿಸರ ಮತ್ತು ಪ್ರಭಾವವನ್ನು ಕಂಡೆವು ಎಂದು. ನಮ್ಮ ಜಲ್ಸ ನಮ್ಮ ಸ್ವಂತ ತರಬೇತಿಗೆ ಮಾತ್ರವಲ್ಲ ತಬ್ಲೀಗ್ ಮಾಡಲಿಕ್ಕೂ ಬಹಳ ದೊಡ್ಡದಾದೊಂದು ಮಾರ್ಗವಾಗಿದೆ. ಈ ವಾಸ್ತವಿಕತೆ ನಮ್ಮಿಂದ ಆವಶ್ಯಪಡುವುದೇನೆಂದರೆ ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದನ್ನು ವರ್ಧಿಸುತ್ತಾ ಇರಬೇಕು ಮತ್ತು ಇಲ್ಲಿನ ಪರಿಸರ ಕೇವಲ ಒಂದು ತಾತ್ಕಾಲಿಕ ಪರಿಸರವಾಗಬಾರದು. ನಮ್ಮ ಜೀವಿತದ ಪ್ರತಿಯೊಂದು ಕ್ಷಣ ಕ್ಷಣಗಳಲ್ಲೂ ಇಸ್ಲಾಮಿನ ಸುಂದರ ಉಪದೇಶಗಳನ್ನು ನಮ್ಮ ಪ್ರತಿಯೊಂದು ಕರ್ಮ ಪ್ರಕಟಿಸುವಂತಾಗಬೇಕು. ನಾವು ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದುದರ ಉದ್ದೇಶ ಲಕ್ಷ್ಯವನ್ನು ಪ್ರತಿಯೊಂದು ಸಮಯದಲ್ಲಿ ಈಡೇರಿಸುವವರಾಗಬೇಕು.

(ಜಲ್ಸದ ಕಾರ್ಯಕರ್ತರಿಗೆ, ಕಾರ್ಯಕರ್ತೆಯರಿಗೆ ಕೃತಜ್ಞತೆ ಅರ್ಪಿಸುತ್ತಾ ಹುಝೂರ್ ಹೇಳಿದರು:) ಜಲ್ಸದ ಕೆಲಸಕ್ಕೋಸ್ಕರ ಆಗಮಿಸುವ ಕಾರ್ಯಕರ್ತರು ತಮ್ಮ ಸ್ವಂತ ಹಿತಾಸಕ್ತಿಗಳನ್ನು ಮತ್ತು ಕೆಲಸಗಳನ್ನು ಹಿಂದಕ್ಕೆ ತಳ್ಳಿ ಜಲ್ಸದ ವ್ಯವಸ್ಥೆಗೆ ಮತ್ತು ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆ ಸಲ್ಲಿಸಲು ತಮ್ಮ ಪ್ರತಿಯೊಂದು ಕ್ಷಣವನ್ನು ಅರ್ಪಿಸುತ್ತಾರೆ. ಅಲ್ಲಾಹನ ಅನುಗ್ರಹದಿಂದ ಜರ್ಮನಿಯ ಜಮಾಅತ್ ಪ್ರಾಮಾಣಿಕ ನಿಷ್ಠೆಯಲ್ಲಿ ವರ್ಧಿಸಿದವರ ಜಮಾಅತ್ ಆಗಿದೆ. ಮಾತ್ರವಲ್ಲ ಕೆಲವು ಬಲಿದಾನಗಳಲ್ಲಿ ಬೇರೆ ಕೆಲವು ಜಮಾಅತ್‌ಗಳಿಗಿಂತ ಹೆಚ್ಚು ವರ್ಧನೆ ಪಡೆದ ಜಮಾಅತ್ ಆಗಿದೆ. ಅಲ್ಲಾಹನು ಅವರ ನಿಷ್ಠೆಯನ್ನು ವರ್ಧಿಸುವವನಾಗಲಿ. ಈ ವರ್ಷ ಜಲ್ಸದಲ್ಲಿ ಭಾಗವಹಿಸಿದವರ ಜನಸಂಖ್ಯೆಯನ್ನು ನೋಡಿದಾಗ ಅಲ್ಲಿನ ಜಮಾಅತ್ ಆಡಳಿತೆ ಸಮಿತಿ ಮತ್ತು ಅಮೀರ್ ಸಾಹಿಬರು ಯೋಚಿಸಿದರು, ನಮಗೆ ಒಂದು ವಿಶಾಲವಾದ ಸ್ವಂತ ಜಲ್ಸಗಾಹ್‌ನ ಆವಶ್ಯಕತೆಯಿದೆ ಎಂದು. ಅಮೀರ್ ಸಾಹಿಬರು ಹೇಳಿದರು: ಒಂದು ಸ್ಥಳವನ್ನು ನೋಡಲಾಗಿದೆ. ಅದನ್ನು ಖರೀದಿಸಲು ಪ್ರಯತ್ನ ಮಾಡಲಾಗುತ್ತಿದೆ. ಆ ಸ್ಥಳ ಅಲ್ಲಾಹನ ದೃಷ್ಟಿಯಲ್ಲಿ ನಮ್ಮ ಜಮಾಅತಿಗೆ ಹಿತಕರವಾಗಿದ್ದರೆ ಆ ಸ್ಥಳವನ್ನು ಖರೀದಿಸುವ ವ್ಯವಸ್ಥೆ ಸಹ ಅಲ್ಲಾಹನು ಮಾಡುವವನಾಗಲಿ ಮತ್ತು ಅದು ಸುಲಭವಾಗಿ ಸಾಧ್ಯವಾಗುವಂತೆ ಮಾಡಲಿ. ಜರ್ಮನಿಯ ಜಲ್ಸ ಸಹ ಈಗ ಅಂತರ್‌ರಾಷ್ಟ್ರೀಯ ಜಲ್ಸವಾಗಿ ಪರಿಣಮಿಸಿದೆ. ಈ ನಿಟ್ಟಿನಿಂದಲೂ ಜಲ್ಸಗಾಹ್ ಮತ್ತು ಅದಕ್ಕೆ ಸಂಬಂಧಿಸಿದ ವ್ಯವಸ್ಥೆಗಳು ವಿಶಾಲತೆ ಹೊಂದುವುದು ಆವಶ್ಯಕವಾಗಿದೆ.

(ಜಲ್ಸದಲ್ಲಿ ಭಾಗವಹಿಸಿದ ಅತಿಥಿಗಳ ಅಭಿಪ್ರಾಯಗಳನ್ನು ವಿವರಿಸುತ್ತಾ ಹುಝೂರ್ ಹೇಳಿದರು:) ಫ್ರಾಂಕ್ ಫರ್ಟ್ ನಗರದ ಒಂದು ಲಾ ಫರ್ಮಿನ ಸೀನಿಯರ್ ಪಾರ್ಟ್ನರ್ ಆದ ಮಿಸ್ಟರ್ ಹಂಸ್ ವಲಿವರ್ ಹೆಂಜೂ ಹೇಳಿದರು: ದೈನಂದಿನ ರೂಢಿಯ ಪ್ರಕಾರ ಬಾಹ್ಯವಾಗಿ ಶಾಂತಿಯಿಂದ ಜೀವಿಸುವಾಗ ಮುಂದೆ ಸಂಭವಿಸಲಿರುವ ಅಪಾಯಗಳು ಮತ್ತು ಯುದ್ಧದ ಬಗ್ಗೆ ಚಿಂತಿಸುವುದು ಬಹಳ ಮಹತ್ವಪೂರ್ಣವಾಗಿದೆ. ಅಹ್ಮದಿಯಾ ಜಮಾಅತಿನ ಇಮಾಮರು ಭವಿಷ್ಯತ್ ಕಾಲದ ಅಪಾಯಗಳ ಬಗ್ಗೆ ವಾಸ್ತವಿಕವಾದ ಪ್ರಜ್ಞೆ ಹೊಂದಿರುವರಲ್ಲದೆ ಲೋಕಕ್ಕೆ ಮುನ್ನೆಚ್ಚರಿಕೆ ಸಹ ನೀಡುತ್ತಿದ್ದಾರೆ.

ಲುಫ್ತಾನ್‌ಸಾ ಏರ್‌ಲೈನ್ಸ್‌ನಲ್ಲಿ ಐ.ಟಿ ಡಿಪಾರ್ಟ್‌ನಲ್ಲಿರುವ ಮೆರೀನ ಪಬ್ಲಿಕ್ ಹೇಳುತ್ತಾರೆ: ವಿಶ್ವ ಶಾಂತಿಯ ಸ್ಥಾಪನೆ ಬಗ್ಗೆ ಮಾತನಾಡುವುದು ಇಂದಿನ ರಾಜಕೀಯ ಧುರೀಣರಿಗೆ ಬಹಳ ಇಷ್ಟಕರವಾದ ವಿಷಯವಾಗಿದೆ. ಆದರೆ ಅಹ್ಮದಿಯಾ ಜಮಾಅತಿನ ಇಮಾಮರ ಮಾತಿನಲ್ಲಿದ್ದ ಶಕ್ತಿಯನ್ನು ನಾನು ಬೇರೆ ಎಲ್ಲಿಯೂ ಕಂಡಿಲ್ಲ. ಸ್ವಾರ್ಥ ಹಿತಾಸಕ್ತಿಗಳನ್ನು ಕಡೆಗಣಿಸಿ ಆವಶ್ಯಕ ಕ್ರಮಗಳನ್ನು ಕೈಗೊಳ್ಳದಿದ್ದರೆ ಆಣವಿಕ ಯುದ್ಧದ ಭಯಾನಕ ನಾಶಗಳಿಗೆ ನಾವು ಹೊಣೆಗಾರರಾಗುವೆವು. ನನ್ನ ಅಭಿಪ್ರಾಯವೇನೆಂದರೆ ಎಷ್ಟು ಸ್ಪಷ್ಟವಾಗಿ ಸಂದೇಶ ನೀಡಲಾಗಿದೆ ಎಂದರೆ, ದ್ವೇಷಗಳು ಅಡ್ಡಿಯಾಗದಿದ್ದರೆ ಮನುಷ್ಯನಿಗೆ ರೋಮಾಂಚನವಾಗಲು ಈ ಎಚ್ಚರಿಕೆ ಧಾರಾಳವಾಗಿದೆ. ನಿರ್ಧಾರಗಳನ್ನು ಕೈಗೊಳ್ಳುವವರಿಗೆ ಈ ಸಂದೇಶ ತಲಪಬೇಕಾಗಿದೆ. ಏಕೆಂದರೆ ಮಾನವೀಯತೆಯ ವಿಶಾಲವಾದ ಏಳಿಗೆಗೋಸ್ಕರ ಈ ವಿಷಯದ ಬಗ್ಗೆ ಜಾಗತಿಕ ಮಟ್ಟದಲ್ಲಿ ಸಾರ್ವತ್ರಿಕ ಪ್ರಜ್ಞೆ ಆವಶ್ಯಕವಾಗಿದೆ.

ಜಲ್ಸದ ವ್ಯವಸ್ಥೆ ಬಗ್ಗೆ ಕೆಲವು ಅಭಿಪ್ರಾಯಗಳು ಹೀಗಿವೆ: ಮೆಸಿಡೋನಿಯಾ ದೇಶದಿಂದ ಆಗಮಿಸಿದ ಪ್ರತಿನಿಧಿ ಸಂಘದ ಒಬ್ಬ ಮಹಿಳೆ ಅಲೆಕ್ಸಾಂಡ್ರೋವ ದವೀನ ಹೇಳುತ್ತಾರೆ: ಅಹ್ಮದಿಯ್ಯತ್ ಇಚ್ಛಿಸುವುದೇನೆಂದರೆ ಜನರು ಆಧ್ಯಾತ್ಮಿಕವಾಗಿ ಉನ್ನತಿ ಗಳಿಸುವವರಾಗಬೇಕು. ಅವರಲ್ಲಿ ಐಕ್ಯತೆಯುಂಟಾಗಬೇಕು.

ಅವರು ದೇವನಿಗೆ ಸಾಮೀಪ್ಯ ಹೊಂದಿದವರಾಗಬೇಕು. ಈ ವರ್ಷ ಜಲ್ಸ ಸಾಲಾನದಲ್ಲಿ ಬಹಳ ಹೆಚ್ಚು ಒಳ್ಳೆಯ ಜನರನ್ನು ನಾನು ಕಂಡೆನು. ಅವರು ಮುಗುಳು ನಗುತ್ತಾ ನಮಗೆ ಬಹಳ ಗೌರವ ನೀಡುತ್ತಿದ್ದರು. ನಾನು ಕೃತಜ್ಞತೆಯೊಂದಿಗೆ ಸಾಕ್ಷ್ಯ ಹೇಳುತ್ತೇನೆ. ನಾನು ಎಂತಹ ಜನರನ್ನು ಕಂಡೆನೆಂದರೆ ಅವರಿಗೆ ದೇವನ ಬಗ್ಗೆ ದೃಢವಿಶ್ವಾಸವಿದೆ. ನೀವು ಈ ಒಳ್ಳೆಯ ಕೆಲಸ ಜಾರಿಯಲ್ಲಿರಿಸುವಿರೆಂದು ನನಗೆ ಪ್ರತೀಕ್ಷೆ ಇದೆ.

ನಮ್ಮ ಜಮಾಅತಿನ ಸದಸ್ಯನಲ್ಲದ ಒಬ್ಬ ವ್ಯಕ್ತಿಯ ಅಭಿಪ್ರಾಯ ನಾನು ನಿಮ್ಮ ಮುಂದೆ ಇರಿಸುವೆನು. ಅವರ ಅಭಿಪ್ರಾಯ ಸೂಚಿಸುವುದೇನೆಂದರೆ ನಾವು ನಮ್ಮ ಜೀವಿತದ ಉದ್ದೇಶಲಕ್ಷ್ಯವನ್ನು ಗುರುತಿಸುವವರೂ ಆ ಉದ್ದೇಶ ಲಕ್ಷ್ಯವನ್ನು ಗಳಿಸುವವರೂ ಆಗಬೇಕು. ಮೆಸಿಡೋನಿಯಾ ದೇಶದ ಪ್ರತಿನಿಧಿ ಸಂಘದ ಒಬ್ಬ ಟಿ.ವಿ. ಚ್ಯಾನಲ್ ವರದಿಗಾರರಾದ ಝೋರಾ ನಚ್‌ಝೋರ್ ಯನ್‌ಸ್ಕಿ ಹೇಳಿದರು: ನಾನು ಜಲ್ಸದಲ್ಲಿ ಎರಡನೆಯ ಸಲ ಭಾಗವಹಿಸುತ್ತಿದ್ದೇನೆ. ಇದು ನನಗೆ ಬಹಳ ಗೌರವದಾಯಕವಾಗಿದೆ. ಜಲ್ಸದ ವ್ಯವಸ್ಥೆ ಬಹಳ ಶ್ರೇಷ್ಠವಾಗಿತ್ತು. ದೇವನನ್ನು ನಂಬುವುದು ಮತ್ತು ಎಲ್ಲಾ ಜನರಿಗೆ ಸಹಾಯ ಮಾಡುವುದು ಎಂತಹ ಕೆಲಸವೆಂದರೆ ಅದು ಎಲ್ಲಾ ಜನರ ಮಧ್ಯೆ ಇರುವ ಭಿನ್ನಾಭಿಪ್ರಾಯಗಳನ್ನು ದೂರಸರಿಸುವುದು.

ಬಲ್ಗೇರಿಯಾ ದೇಶದ ಪ್ರತಿನಿಧಿ ಸಂಘದ ಒಬ್ಬ ಕ್ರೈಸ್ತ ಮಹಿಳೆ ಜೂಲಿಯಾ ಸಾಹಿಬ ಹೇಳಿದರು: ಜಮಾಅತ್ ಅಹ್ಮದಿಯಾದ ಜಲ್ಸದಲ್ಲಿ ಭಾಗವಹಿಸುವ ಸಾವಿರಗಟ್ಟಲೆ ಜನರೊಂದಿಗೆ ನಾನು ಸಹ ಜಲ್ಸದಲ್ಲಿ ಭಾಗವಹಿಸುವಾಗ ಬಹಳ ಉದ್ವೇಗಭರಿತಳಾಗುತ್ತೇನೆ. ನಿಸ್ಸಂಶಯವಾಗಿ ನಾನು ಕ್ರೈಸ್ತಳಾಗಿದ್ದೇನೆ. ಆದರೆ ನನಗೆ ನಿಮ್ಮ ಭಾಷಣ ಬಹಳ ಮೆಚ್ಚಿಗೆಯಾಯಿತು. ನೀವು ಮಾಡಿದ ಪ್ರಾರ್ಥನೆಗಳು ಹೃದಯದ ಮೇಲೆ ಪ್ರಭಾವ ಬೀರುವವುಗಳಾಗಿದ್ದುವು. ಪವಿತ್ರ ಖುರ್‌ಆನಿನ ಪಾರಾಯಣವನ್ನು ನಾನು ಬಹಳ ಇಷ್ಟಪಟ್ಟೆನು. ವಿದ್ಯಾರ್ಥಿಗಳಿಗೆ ಪಾರಿತೋಷಿಕಗಳನ್ನು ನೀವು ಸ್ವತಃ ನಿಮ್ಮ ಕೈಗಳಿಂದ ನೀಡಿದುದು ಪ್ರಶಂಸಾರ್ಹವಾಗಿದೆ. ಬಲ್ಗೇರಿಯಾದ ಪ್ರತಿನಿಧಿ ಸಂಘದ ಇನ್ನೊಬ್ಬ ಮಹಿಳೆ ಕೇಸ್‌ಮಾ ಅಲ್‌ಮೇರಾ ಸಾಹಿಬ ಹೇಳುತ್ತಾರೆ: ನನಗೆ ಜರ್ಮನಿಯ ಜಲ್ಸ ಸಾಲಾನದಲ್ಲಿ ಮೂರನೆಯ ಸಾರಿ ಭಾಗವಹಿಸುವ ಸಂದರ್ಭ ಸಿಗುತ್ತಿದೆ. ಪ್ರತಿ ವರ್ಷ ನನಗೆ ಜಲ್ಸದಲ್ಲಿ ಹೊಸದಾದ ವಿಷಯ ಕಲಿಯಲು ಸಿಗುತ್ತದೆ. ನಾನು ಭಾಷಣಗಳನ್ನು ಶ್ರದ್ಧೆಯಿಟ್ಟು ಆಲಿಸುತ್ತೇನೆ. ಏಕೆಂದರೆ ನಾನು ಒಬ್ಬ ಫಿಸಿಯೋ ತೆರಪಿಸ್ಟ್ ಮತ್ತು ಸೈಕ್ಲೋಜಿಸ್ಟ್ ಆಗಿರುವೆನು. ಈ ಭಾಷಣಗಳಲ್ಲಿ ವಿವರಿಸಲಾಗುವ ಅಹ್ಮದಿಯಾ ಜಮಾಅತಿನ ಉಪದೇಶಗಳಿಂದ ಲಾಭ ಪಡೆದು ಪ್ರತಿಯೊಬ್ಬ ರೋಗಿಯ ಸಮಸ್ಯೆಗಳಿಗೆ ನಾನು ಅತ್ಯುತ್ತಮ ಪರಿಹಾರ ಸೂಚಿಸಬಲ್ಲೆನು. ನಾನು ನನಗೋಸ್ಕರ ಸಹ ಒಳ್ಳೆಯ ಉಪದೇಶಗಳನ್ನು ಸಂಗ್ರಹಿಸಿ ಒಯ್ಯುತ್ತಿದ್ದೇನೆ.

ಗರ್ಝುಮ್ ಅಝೂಚಿ ಸಾಹಿಬ್ ಎಂಬ ಒಬ್ಬ ಅಹ್ಮದಿ, ಅವರು ಹಿಂದೆ ಧರ್ಮ ರಹಿತದ ಸೊಸೈಟಿಯ ಸದಸ್ಯರಾಗಿದ್ದರು.. ಕೆಲವು ವರ್ಷಗಳ ಹಿಂದೆ ನಮ್ಮ ಜಮಾಅತ್‌ನೊಂದಿಗೆ ಸಂಪರ್ಕ ಸ್ಥಾಪಿಸಿದರು. ಧರ್ಮದ ಬಗ್ಗೆ ಮತ್ತು ಇಸ್ಲಾಮ್ ಬಗ್ಗೆ ಅಹ್ಮದಿಯಾ ಜಮಾಅತ್ ನೀಡುವ ಉಪದೇಶಗಳು ಮತ್ತು ಸಾಕ್ಷ್ಯಾಧಾರಗಳು ಅವರಿಗೆ ಬಹಳ ತರ್ಕಬದ್ಧವಾಗಿರುವುದಾಗಿ ತಿಳಿಯಿತು. ಅದಕ್ಕೆ ಮೊದಲು ಮೌಲವಿಗಳ ಕಥೆಗಳನ್ನು ಆಲಿಸಿ ಅವರ ಹೃದಯ ಧರ್ಮದ ಬಗ್ಗೆ ಬೇಸರಗೊಂಡಿತ್ತು. ಕೆಲವು ವರ್ಷಗಳ ಹಿಂದೆ ಅವರು ಬೈಅತ್ ಮಾಡಿದರು. ಕ್ರಮೇಣ ಅವರು ಇಸ್ಲಾಮೀ ಉಪದೇಶಗಳಿಗೆ ಬದ್ಧರಾದರು. ಅವರು ಹೇಳುತ್ತಾರೆ: ಜಲ್ಸ ಸಾಲಾನ ಬಹಳ ವೈಶಿಷ್ಟ್ಯಪೂರ್ಣವಾಗಿತ್ತು. ಜಲ್ಸದ ವ್ಯವಸ್ಥೆ ಮತ್ತು ಅತಿಥಿ ಸತ್ಕಾರ ಪ್ರತಿ ವರ್ಷದ ಹಾಗೆ ಅತ್ಯುತ್ತಮವಾಗಿತ್ತು. ಲಜ್‌ನದಲ್ಲಿ ನಾನು ಮಾಡಿದ ಭಾಷಣ ಮತ್ತು ನನ್ನ ಸಮಾರೋಪ ಭಾಷಣದಿಂದ ಅವರು ಬಹಳ ಪ್ರಭಾವಿತರಾದರೆಂದು ಅವರು ಹೇಳಿದರು. 'ಈ ಸಂದೇಶವನ್ನು ಪುರುಷರಾದ ನಾವು ಯಾವಾಗಲೂ ನೆನಪಿನಲ್ಲಿಡಬೇಕೆಂದು' ಅವರು ಹೇಳಿದರು.

ಇನ್ನೊಬ್ಬ ಅತಿಥಿ ಅಲ್‌ಬೇನಿಯಾದ ಏಲಿ ಶವಾನ್‌ಚಿ ಎಂಬವರು. ಈಗ ಅವರು ಜರ್ಮನಿಯಲ್ಲಿ ವಾಸಿಸುತ್ತಿದ್ದಾರೆ. ಅವರು ನಮ್ಮ ಅತಿಥಿಯಾಗಿ ಜಲ್ಸಕ್ಕೆ ಆಗಮಿಸಿದ್ದರು. ಅವರು ಹೇಳುತ್ತಾರೆ: ಜಲ್ಸ ಸಾಲಾನ ಪ್ರತಿಯೊಬ್ಬ ಅಹ್ಮದಿಗೆ ಒಂದು ಆಧ್ಯಾತ್ಮಿಕ ಸಮಾವೇಶವಾಗಿದೆ. ಜಲ್ಸ ಸಾಲಾನದಲ್ಲಿ ಭಾಗವಹಿಸುವಾಗ ಇಸ್ಲಾಮಿನ ಮೂಲ ತತ್ವಗಳ ಬಗ್ಗೆ ಜ್ಞಾನ ವರ್ಧಿಸುತ್ತದೆಯಲ್ಲದೆ ಅಹ್ಮದಿಯಾ ಜಮಾಅತಿನಲ್ಲಿ ಸ್ಥಾಪಿತವಾದ ಖಿಲಾಫತ್ ಮೂಲಕ ಇಸ್ಲಾಮಿನ ಸುಂದರ ತತ್ವಗಳ ಅನುಷ್ಠಾನ ರೂಪವನ್ನು ಕಾಣಲು ಮತ್ತು ಅನುಭವಿಸಲು ಸಾಧ್ಯವಾಗುತ್ತದೆ. ಒಬ್ಬ ಅಹ್ಮದಿ ಮುಸ್ಲಿಮನಾದ ನಾನು ಇಡೀ ವರ್ಷ ಜಲ್ಸದ ಸಮಾವೇಶವನ್ನು ಬಹಳ ಆಸಕ್ತಿಯಿಂದ ಕಾಯುತ್ತಾ ಇರುತ್ತೇನೆ. ಏಕೆಂದರೆ ಜಲ್ಸದಲ್ಲಿ ಒಂದು ನೈಜ ಭ್ರಾತೃತ್ವದ ಆತ್ಮ ಕಾಣಿಸುತ್ತದೆ. ಅದನ್ನು ಮಾತಿನಲ್ಲಿ ವಿವರಿಸಲು ಸಾಧ್ಯವಿಲ್ಲ. ಈ ಜಲ್ಸದಲ್ಲಿ ಭಾಗವಹಿಸುವಾಗ ನಾನು ಸ್ವರ್ಗದಲ್ಲಿರುವೆನೋ ಎಂಬಂತೆ ಭಾಸವಾಗುತ್ತದೆ. ನಾನು ಅತ್ಯಂತ ಭಾಗ್ಯಶಾಲಿ ಮನುಷ್ಯನೆಂದು ಭಾವಿಸುತ್ತೇನೆ. ನಾನು ಮುಂದಿನ ವರ್ಷದ ಜಲ್ಸವನ್ನು ಪ್ರತೀಕ್ಷಿಸುತ್ತಾ ಬಹಳ ಸಹನೆರಹಿತನಾಗಿ ಕಾಯುತ್ತಾ ಇರುತ್ತೇನೆ.

ಜೋರ್ಜಿಯಾ ದೇಶದ ಪ್ರತಿನಿಧಿ ಸಂಘದಲ್ಲಿ ಧಾರ್ಮಿಕ ಜ್ಞಾನದ ವಿದ್ಯಾರ್ಥಿನಿ ನಾನೂಕಾ ಸಾಹಿಬ ಎಂಬವರು ಇದ್ದರು. ಬೈಅತ್ ಸಮಾರಂಭದ ಬಗ್ಗೆ ಅವರು ಹೇಳುತ್ತಾರೆ: ಬೈಅತ್ ಸಮಾರಂಭ ಉದ್ವೇಗಭರಿತವಾಗಿತ್ತು. ನನಗೆ ಧಾರ್ಮಿಕ ಐಕ್ಯದ ಒಂದು ದೃಶ್ಯ ನೋಡಲು ಸಾಧ್ಯವಾಯಿತು. ವಿವಿಧ ವಂಶಗಳ ಮತ್ತು ವರ್ಣಗಳ ಜನರು ಶಾಂತಿಯಿಂದ ಹೇಗೆ ಒಗ್ಗೂಡಬಲ್ಲರೆಂದು ನನಗೆ ತಿಳಿಯಿತು. ನಾನು ಧಾರ್ಮಿಕ ಜ್ಞಾನ ಗಳಿಸುತ್ತಿದ್ದೇನೆ. ನಾನು ಪ್ರಥಮ ಸಾರಿ ಜಲ್ಸದಲ್ಲಿ ಭಾಗವಹಿಸುತ್ತಿದ್ದೇನೆ. ಈ ಜಲ್ಸ ಶಾಂತಿಯನ್ನು ಗಳಿಸಲು ಅತ್ಯುತ್ತಮ ಮಾರ್ಗವಾಗಿದೆ ಎಂದು ನನಗೆ ದೃಢ ವಿಶ್ವಾಸವಿದೆ.

ಕೋಸೋವೋದಿಂದ ಆಗಮಿಸಿದ ಪ್ರತಿನಿಧಿ ಸಂಘದಲ್ಲಿದ್ದ ಮಿಸ್ಟರ್ ಶೈಬ್ ಝುಕರ್‌ಜಿ ಸಾಹಿಬ್ ಹೇಳುತ್ತಾರೆ: ಜಲ್ಸದಲ್ಲಿ ಭಾಗವಹಿಸಬೇಕೆಂಬ ಸಮಾಚಾರ ದೊರೆತಾಗ ನನಗೆ ಬಹಳ ಸಂತೋಷವಾಯಿತು. ಆದರೆ ಪ್ರಯಾಣದ ಖರ್ಚಿನ ಬಗ್ಗೆ ಯೋಚಿಸಿದಾಗ ಬಹಳ ಗೊಂದಲ ಸ್ಥಿತಿ ಆಯಿತು. ಜಲ್ಸದಲ್ಲಿ ಭಾಗವಹಿಸಿ ಖಲೀಫರನ್ನು ಭೇಟಿಯಾಗಲು ನನಗೆ ಬಹಳ ಹಂಬಲವಿತ್ತು. ಆದುದರಿಂದ ನನ್ನ ಗೋವನ್ನು ಮಾರಾಟ ಮಾಡಿ

ಖರ್ಚು ವೆಚ್ಚದ ಕೊರತೆ ನೀಗಿಸಿದೆ. ಅಹ್ಮದಿಯರಾದ ನಂತರ ಸಹ ಜನರು ಈ ರೀತಿ ಬಲಿದಾನ ಮಾಡಿ ಜಲ್ಸದಲ್ಲಿ ಭಾಗವಹಿಸಲು ಪ್ರಯತ್ನ ಮಾಡುತ್ತಾರೆ.

ಮಾಲ್‌ಟಾದಿಂದ ಆಗಮಿಸಿದ ಮೂವರು ಮಹಿಳೆಯರು ಮಹಿಳೆಯರ ಮಾರ್ಕಿ (ಡೇರೆ)ಗೆ ಹೋದರು. ಅವರು ಹೇಳುತ್ತಾರೆ: ನಮ್ಮ ಬಗ್ಗೆ ಬಹಳ ಮುತವರ್ಜಿ ವಹಿಸಲಾಯಿತು. ಬಹಳ ಸಾರಿ ನಮ್ಮ ಆವಶ್ಯಕತೆಗಳ ಬಗ್ಗೆ ವಿಚಾರಿಸಲಾಯಿತು. ಅಲ್ಲಿ ಒಂದು ಕುಟುಂಬದಂತಹ ಪರಿಸರವಿತ್ತು. ನಾವು ಒಬ್ಬರಿನ್ನೊಬ್ಬರನ್ನು ಚೆನ್ನಾಗಿ ಪ್ರಾಯಶಃ ಶತಮಾನ ಕಾಲದಿಂದ ಪರಿಚಯ ಹೊಂದಿರುವಂತೆ ಭಾಸವಾಗುತ್ತಿತ್ತು. ಆದರೆ ನಾವು ಪ್ರಥಮ ಬಾರಿ ಭೇಟಿಯಾದವರಾಗಿದ್ದೆವು. ಅವರು ಹೇಳುತ್ತಾರೆ: ಮಹಿಳೆಯರ ಮಾರ್ಕಿ ಹೆಚ್ಚು ಸೌಕರ್ಯ ಪೂರ್ಣವಾಗಿತ್ತು. ನಮಗೆ ಎರಡು ಕಡೆಗಳ ಪರಿಸರದ ಅನುಭವ ಗಳಿಸಲು ಸಂದರ್ಭ ಲಭಿಸಿತು. ನಾವು ನಮ್ಮ ಅನುಭವದಿಂದ ಹೇಳುತ್ತೇವೆ. ಇಸ್ಲಾಮಿನ ಉಪದೇಶಗಳು ಬಹಳ ಗಾಢವಾದ ಅರ್ಥವುಳ್ಳದ್ದೂ ವಿವೇಕಭರಿತವೂ ಆಗಿವೆ. ಮಹಿಳೆಯರು ಪ್ರತ್ಯೇಕ ಸ್ಥಳದಲ್ಲಿ ಹೆಚ್ಚು ಸೌಲಭ್ಯಗಳನ್ನೂ ಸಮಾಧಾನವನ್ನೂ ಅನುಭವಿಸುತ್ತಾರೆ. ಅವರಿಗೆ ತಮ್ಮದೇ ಆದ ಸ್ವಂತ ವ್ಯವಸ್ಥೆ ಮಾಡಲು ತಮ್ಮ ಪ್ರತಿಭೆಗಳನ್ನು ಪ್ರಕಟಿಸಲು ವಿಶಾಲವಾದ ಸಂದರ್ಭ ಸಿಗುತ್ತದೆ.

ನೋಡಿರಿ, ಪುರುಷರ ಮತ್ತು ಮಹಿಳೆಯರ ಪ್ರತ್ಯೇಕ ವ್ಯವಸ್ಥೆಗಳು ಆವಶ್ಯಕವಾಗಿವೆ ಎಂದು ಮುಸ್ಲಿಮೇತರ ಮಹಿಳೆಯರೂ ಈಗ ಅಂಗೀಕರಿಸಲು ತೊಡಗಿದ್ದಾರೆ. ಆದರೆ ನಮ್ಮ ಯುವ ಪೀಳಿಗೆಯ ಕೆಲವು ಹುಡುಗಿಯರಿಗೆ ಕೆಲವು ಸಾರಿ ಯೋಚನೆ ಬರುತ್ತದೆ – ಒಟ್ಟಿಗೆ ಏಕೆ ವ್ಯವಸ್ಥೆ ಮಾಡುವುದಿಲ್ಲ ಎಂದು. ಸ್ವಾತಂತ್ರ್ಯ ಇಲ್ಲ ಎಂದೆಲ್ಲಾ ಯೋಚಿಸುತ್ತಾರೆ. ಈ ಹುಡುಗಿಯರು ಸಹ ಚಿಂತಿಸಬೇಕು.

ಕಿರ್ಗಿಸ್ಥಾನದಿಂದ ಆಗಮಿಸಿದ ಒಬ್ಬ ಅತಿಥಿ ಹೇಳಿದರು: ಜಲ್ಸದಲ್ಲಿ ಭಾಗವಹಿಸಿ ಅಸಾಧಾರಣವಾದ ಭಾವನೆಗಳು ತಲೆದೋರಿದುವು. ಅಹ್ಮದಿಯಾಗುವ ಮೊದಲು ನನಗೆ ಎಂದೂ ಅಳು ಬರುತ್ತಿರಲಿಲ್ಲ. ಆದರೆ ಖಾದಿಯಾನ್ ಮತ್ತು ಜರ್ಮನಿಯಲ್ಲಿ ನನಗೆ ಅಳು ಬಂದಿತು. ಹೃದಯದಲ್ಲಿ ಒಂದು ಬದಲಾವಣೆ, ಒಂದು ಮೃದುತ್ವ ಸಂಭವಿಸಿದ ಹಾಗೆ ಭಾಸವಾಗುತ್ತಿತ್ತು. ಬೈಅತ್ ಮಾಡುವ ಪ್ರತಿಯೊಬ್ಬನನ್ನು ನೋಡಿದಾಗ ನನ್ನ ವಿಶ್ವಾಸ ವರ್ಧಿಸುತ್ತದೆ. ನಾನು ಹಿಂದೆ ಮೌಲವಿಯಾಗಿದ್ದೆ. ಪವಿತ್ರ ಖುರ್‌ಆನ್‌ನಲ್ಲಿ ದಜ್ಜಾಲ್ ಮತ್ತು ಮಸೀಹ್ ಅಲೈಹಿಸ್ಸಲಾಮರ ಬಗ್ಗೆ ವಿವರಿಸಲಾದ ಎಲ್ಲಾ ವಿಷಯಗಳು ಅಹ್ಮದಿಯಾ ಜಮಾಅತಿನ ಗ್ರಂಥಗಳನ್ನು ಓದಿದಾಗ ನನಗೆ ಅವುಗಳ ವಾಸ್ತವಿಕ ಅರ್ಥ ಮನವರಿಕೆಯಾಯಿತು. ಬೈಅತ್ ಮಾಡುವಾಗ ನನ್ನ ಮೇಲೆ ತಣ್ಣೀರು ಸುರಿಯುತ್ತಿರುವ ಹಾಗೆ ಅನುಭವವಾಯಿತು. ನಾನು ಈಗ ನೈಜ ಮುಸ್ಲಿಮನಾಗಿದ್ದೇನೆ.

ಸೆನೆಗಲ್ ದೇಶದಿಂದ ಆಗಮಿಸಿದ ಒಬ್ಬ ಅತಿಥಿ ಹೇಳುತ್ತಾರೆ: ನಾನು ಜಲ್ಸ ಸಾಲಾನದಲ್ಲಿ ಭಾಗವಹಿಸದೆ ಇರುತ್ತಿದ್ದರೆ ಮತ್ತು ತಮ್ಮನ್ನು ಭೇಟಿಯಾಗದಿರುತ್ತಿದ್ದರೆ ನಾನು ನನ್ನ ಜೀವಿತದಲ್ಲಿ ಬಹಳ ದೊಡ್ಡ ಶೂನ್ಯತೆ ಅನುಭವಿಸುತ್ತಿದ್ದೆ. ಈ ದಿನ ನನ್ನ ಜೀವಿತದ ಧ್ಯೇಯ ಪೂರ್ಣವಾಯಿತು ಎಂದು ನಾನು ಮನವರಿಕೆ ಮಾಡಿದೆನು. ಅವರು ಒಂದು ನೌಕೆಯನ್ನು ತಮ್ಮ ಮಡಿಲಲ್ಲಿರಿಸಿ ಕುಳಿತಿದ್ದರು. ನಾನು ಅದರ ಬಗ್ಗೆ ಕೇಳಿದಾಗ ಹೇಳಿದರು: ನಾವು ಈ ನೌಕೆಯನ್ನು ನಿಮಗೆ ಪಾರಿತೋಷಿಕವಾಗಿ ತಂದಿದ್ದೇವೆ. ಇದು ಶಾಂತಿಯ ನೌಕೆಯಾಗಿದೆ. ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ ಎಂದು ಹೇಳುವವರ ನೌಕೆಯಾಗಿದೆ. ಇದರಲ್ಲಿ ಸವಾರಿ ಮಾಡುವವನೇ ಶಾಂತಿ ಗಳಿಸುವವನು. ಇದು ಅಹ್ಮದಿಯ್ಯತ್ತಿನ ನೌಕೆಯಾಗಿದೆ. ಈ ನೌಕೆ ಪಾರಿತೋಷಿಕವಾಗಿ ತಮಗೆ ನೀಡುವುದಕ್ಕೆ ಇನ್ನೊಂದು ಉದ್ದೇಶ ಸಹ ಇದೆ. ನಮ್ಮ ದೇಶದ ಜೀವನಾಧಾರ ನೌಕೆಯೊಂದಿಗೆ ಸಂಬಂಧಿಸಿದೆ. ಅಲ್ಲಿ ಮೀನು ಹಿಡಿಯುವರು ಬಹಳ ಹೆಚ್ಚಿಗೆ ಇದ್ದಾರೆ. ಆದುದರಿಂದ ನಮ್ಮ ದೇಶಕ್ಕೋಸ್ಕರ ವಿಶಿಷ್ಟವಾಗಿ ಪ್ರಾರ್ಥಿಸಿರಿ ಎಂದು ಹೇಳಿದರು.

ಬೋಸ್ನಿಯಾದಿಂದ ಆಗಮಿಸಿದ ಯಾಸ್‌ಮೀನ್ ಸಪಾಚೀತ್ ಸಾಹಿಬ್ ಹೇಳುತ್ತಾರೆ: ನಿಮ್ಮ ಇಸ್ಲಾಮ್, ಇಸ್ಲಾಮ್ ಧರ್ಮ ಸ್ಥಾಪಕರೊಂದಿಗೆ ಪ್ರೀತಿ, ಆ ಪ್ರೀತಿಯ ಹರಡುವಿಕೆ, ಪ್ರೀತಿಯನ್ನು ಹರಡುವ ನಿಮ್ಮ ಶಬ್ದಗಳಿಂದ ಪ್ರಕಟವಾಗುತ್ತವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪವಿತ್ರ ಜೀವನದ ಘಟನೆಗಳನ್ನು ಉಲ್ಲೇಖಿಸಿ ನೀವು ನೀಡಿದ ಉಪದೇಶಗಳು ಹೃದಯಸ್ಪರ್ಶಿಯಾಗಿದ್ದುವು. ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಾಡುತ್ತಿದ್ದ ಕೆಲಸ ಇದುವೇ ಆಗಿತ್ತು. ನಾನು ಪ್ರಾರ್ಥಿಸುತ್ತೇನೆ ಮುಂದಿನ ವರ್ಷದ ಜಲ್ಸ ಈ ವರ್ಷದ ಜಲ್ಸಕ್ಕಿಂತಲೂ ಉತ್ತಮವಾಗಿರಲಿ. ಈ ಜಲ್ಸ ಮುಸ್ಲಿಮ್ ಸಮುದಾಯದಲ್ಲಿ ಶಕ್ತಿಯನ್ನೂ ಐಕ್ಯತೆಯನ್ನೂ ಸೃಷ್ಟಿಸುವಂತಹದಾಗಲಿ.

ಯಮೀನ ಚಾಶಿಯುಶ್ ಸಾಹಿಬ ಹೇಳುತ್ತಾರೆ: ಜಲ್ಸದಲ್ಲಿ ಭಾಗವಹಿಸಿ ಹೀಗೆ ಭಾಸವಾಯಿತು. ಜಲ್ಸದ ಪರಿಸರದಲ್ಲಿ ಎಂತಹ ಶಕ್ತಿ ಮತ್ತು ಪ್ರಭಾವ ಇದೆ ಎಂದರೆ ಆಧ್ಯಾತ್ಮಿಕವಾಗಿ ಮೃತನಾದ ಮನುಷ್ಯನಲ್ಲಿ ಜೀವಿತದ ಆತ್ಮ ಆಗಮಿಸುತ್ತವೆ. ಲಬನಾಸ್ ದೇಶದ ಕಮಾಲ್ ಲವಾನ್ ಸಾಹಿಬ್ ಹೇಳುತ್ತಾರೆ: ಜಲ್ಸದಲ್ಲಿ ಜಮಾಅತಿನ ಸತ್ಯತೆ ಬಗ್ಗೆ ಎಲ್ಲದಕ್ಕಿಂತಲೂ ಮೊದಲು ಲಭಿಸಿದ ಸಾಕ್ಷ್ಯಾಧಾರ ಇಷ್ಟು ಬೃಹತ್ ಸಂಖ್ಯೆಯಲ್ಲಿ ಜನರು ಆಗಮಿಸಿದುದು ಮತ್ತು ಜಲ್ಸದ ಸುವ್ಯವಸ್ಥೆ ಆಗಿದೆ. ಜಲ್ಸದ ಮಧ್ಯೆ ಒಬ್ಬ ಸ್ನೇಹಿತ ನನ್ನೊಂದಿಗೆ ಹೇಳಿದರು: ಇವರು ಖಲೀಫತುಲ್ ಮುಸ್ಲಿಮೀನ್ ಆಗಿದ್ದಾರೆ ಎಂದು. ಅನಂತರ ನಾನು ಅಹ್ಮದಿಯರೊಂದಿಗೆ ವಿವಿಧ ಪ್ರಶ್ನೆಗಳನ್ನು ಕೇಳಿದೆ. ಅವರು ಪ್ರೀತಿಯಿಂದ ಉತ್ತರ ನೀಡಿದರು. ನನ್ನ ಹೃದಯ ಅಹ್ಮದಿಯ್ಯತ್ತಿನ ಸತ್ಯತೆ ಬಗ್ಗೆ ಸಮಾಧಾನ ಹೊಂದುತ್ತಾ ಇತ್ತು. ನಾನು ಯೋಚಿಸಿದೆ ಮುಂದಿನ ವರ್ಷದ ತನಕ ಜೀವಿಸಿರುವೆನೋ ಇಲ್ಲವೋ ಎಂದು ತಿಳಿಯದು. ಆದುದರಿಂದ ನಾನು ಈಗಲೇ ಬೈಅತ್ ಮಾಡಲು ಇಚ್ಛಿಸಿದೆ. ಹಾಗೆ ನಾನು ಬೈಅತ್ ಮಾಡಿದೆ.

ಫುವಾದ್ ಸಾಹಿಬ್ ಹೇಳುತ್ತಾರೆ: ನಾನು 2018ರಲ್ಲಿ ಬೈಅತ್ ಮಾಡಿದೆ. ಆದರೆ ನನ್ನ ಪತ್ನಿ ಬೈಅತ್ ಮಾಡಲು ನಿರಾಕರಿಸಿದಳು. ನಾನು ಹೇಳಿದೆ: ನೀನು ಈ ಪುಸ್ತಕಗಳನ್ನು ಓದು ಮತ್ತು ಅಲ್ಲಾಹನೊಂದಿಗೆ ಇಸ್ತಿಖಾರ ಮಾಡು. ನನ್ನ ಪತ್ನಿ ಮೂರು ತಿಂಗಳು ಕಾಲ ಇಸ್ತಿಖಾರ ಮಾಡಿದಳು. ಆಕೆ ಸ್ವಪ್ನದಲ್ಲಿ ಕಂಡಳು. ಜನರು ಜಮಾಯಿಸಿದ್ದಾರೆ. ಅವರ ಗುಂಪಿನ ಮಧ್ಯದಲ್ಲಿ ಒಂದು ಬಿಳಿ ಪಾರಿವಾಳವಿದೆ. ನನ್ನ ಪತ್ನಿ ಕೇಳಿದಳು: ಈ

ಪಾರಿವಾಳ ಏನು? ಆಗ ಜನರಲ್ಲಿ ಒಬ್ಬ ಹೇಳಿದನು: ಈ ಪಾರಿವಾಳ ಇಸ್ಲಾಮನ್ನು ಹರಡಲು ಖುದ್ಸ್ ಪ್ರದೇಶಕ್ಕೆ ಬಂದಿದೆ. ಈ ಸ್ವಪ್ನ ನನ್ನ ಪತ್ನಿಯ ಹೃದಯವನ್ನು ತೆರೆಯಿತು. ಈ ವರ್ಷ ಎಂದರೆ 2019ರ ಜಲ್ಸದಲ್ಲಿ ಭಾಗವಹಿಸಿ ಬೈಅತ್ ಮಾಡಿದಳು. ಅಲ್ಲಾಹನು ನನ್ನ ಸಂಪೂರ್ಣ ಕುಟುಂಬಕ್ಕೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡುವ ಭಾಗ್ಯ ನೀಡಿದನು. ನಾನು ಈಗ ನನ್ನ ಎಲ್ಲಾ ಸಂಬಂಧಿಕರಿಗೆ ಸಹ ತಬ್ಲೀಗ್ ಮಾಡುವೆನು.

ಅಲ್ಲಾಹನು ಬೈಅತ್ ಮಾಡಿದ ಈ ಜನರ ನಿಷ್ಠೆಯಲ್ಲೂ ಈಮಾನ್‌ನಲ್ಲೂ ಅಭಿವೃದ್ಧಿಯನ್ನು ದಯಪಾಲಿಸಲಿ. ನಮ್ಮ ಪೈಕಿ ಪ್ರತಿಯೊಬ್ಬನನ್ನು ಜಲ್ಸದ ಅನುಗ್ರಹಗಳನ್ನು ಗಳಿಸುವಂತೆ ಮಾಡಲಿ. ನಮ್ಮನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಾರ್ಥನೆಗಳ ವಾರೀಸುದಾರರನ್ನಾಗಿ ಮಾಡಲಿ – ಆಮೀನ್.

ಮೀಡಿಯಾ ಕವರೇಜ್ ಬಗ್ಗೆ ಹುಝೂರ್ ಹೇಳಿದರು: ಈ ವರ್ಷ ಹದಿಮೂರು ಔಟ್‌ಲೆಟ್‌ಗಳ ಮೂಲಕ ಜಲ್ಸದ ಕವರೇಜ್ ಮಾಡಲಾಯಿತು. ಇಟಲಿ, ಚೀನ, ಸ್ಲೋವಾಕಿಯಗಳ ಆನ್‌ಲೈನ್ ಪತ್ರಿಕೆಗಳಲ್ಲಿ ಸಹ ವರದಿಗಳು ಪ್ರಕಟವಾದುವು. ಒಟ್ಟು ಎರಡು ಕೋಟಿ ಇಪ್ಪತ್ತಾರು ಲಕ್ಷ ಜನರಿಗೆ ಸಂದೇಶ ತಲಪಿತು ಎಂದು ಅಂದಾಜು ಮಾಡಲಾಗಿದೆ.

ಅಲ್ಲಾಹನ ಅನುಗ್ರಹದಿಂದ ಬಹಳ ವಿಶಾಲವಾಗಿ ಜಮಾಅತಿನ ಪರಿಚಯ ಆಗಿದೆ. ಅಲ್ಲಾಹನು ಎಲ್ಲಾ ರೀತಿಗಳಲ್ಲೂ ಅನುಗ್ರಹ ದಯಪಾಲಿಸುವವನಾಗಲಿ – ಆಮೀನ್.

———————*****———————


***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 12-07-2019.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim |***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon